# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 489 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.12.2022 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರದ ಗೋದಾಮುಗಳಲ್ಲಿ ಅನ್ನಭಾಗ್ಯದ ಅಕ್ಕಿ, ಗೋಧಿ, ಆಹಾರಧಾನ್ಯಗಳ ರಾಶಿಯು ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೊಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಇದರ ಸಂರಕ್ಷಣೆಗೆ ಹಾಗೂ ಸರಿಯಾದ ವಿತರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಪ್ರತಿ ಸಂಗ್ರಹಗಾರ/ತಾಲ್ಲೂಕು /ಜಿಲ್ಲೆವಾರು ಎಷ್ಟು ಪ್ರಮಾಣದ ಆಹಾರ ಧಾನ್ಯಗಳು ಹಾನಿಯಾಗಿದೆ; (ಹಾನಿಯಾದ ಆಹಾರ ಧಾನ್ಯಗಳ ಪ್ರಮಾಣ ಸಹಿತ ವಿವರ ನೀಡುವುದು) | ಪಡಿತರ ಫಲಾನುಭವಿಗಳಿಗೆ ವಿತರಿಸುವ ಆಹಾರ ಧಾನ್ಯವನ್ನು ಪ್ರತಿ ತಿಂಗಳು ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ಮುಂದಿನ ತಿಂಗಳಲ್ಲಿ ವಿತರಣೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಗೋದಾಮುಗಳಲ್ಲಿ ದೀರ್ಘಕಾಲ ಪಡಿತರ ಆಹಾರ ಧಾನ್ಯಗಳ ಶೇಖರಣೆ ಇರುವುದಿಲ್ಲದ ಕಾರಣ ಯಾವುದೇ ಆಹಾರ ಧಾನ್ಯಗಳು ಕೊಳೆಯುತ್ತಿರುವುದಿಲ್ಲ. |
| ಆ | ಈ ನಿಟ್ಟಿನಲ್ಲಿ ಸಂಭವಿಸಿದ ಹಾನಿಗೆ ಯಾರು ಹೊಣೆಗಾರರು, ಅವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ಹೆಸರು, ಹುದ್ದೆವಾರು ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ | 2020-21, 2021-22ನೇ ಸಾಲುಗಳಲ್ಲಿ ಸರ್ಕಾರ ವಿತರಿಸಿದ ಒಟ್ಟು ಆಹಾರ ಧಾನ್ಯಗಳ ಪ್ರಮಾಣ ಎಷ್ಟು; ಈ ಪೈಕಿ ವಿತರಿಸಲಾದ ಆಹಾರದ ಪ್ರಮಾಣ ಎಷ್ಟು; ಯಾವುವು, ಗೋದಾಮುಗಳಲ್ಲಿ ಉಳಿದ ಆಹಾರಧಾನ್ಯಗಳ ಪ್ರಮಾಣವೆಷ್ಟು; | 2020-21 ಮತ್ತು 2021-22ನೇ ಸಾಲುಗಳಲ್ಲಿ ಅಂತ್ಯೋದಯ ಮತ್ತು ಆದ್ಯತಾ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿ (NFSA ಮತ್ತು PMGKAY ಎರಡು ಯೋಜನೆಗಳಿಂದ ಒಟ್ಟಾಗಿ) ವಿತರಿಸಲಾದ ಆಹಾರ ಧಾನ್ಯಗಳ ಪ್ರಮಾಣದ ವಿವರಗಳು ಕೆಳಕಂಡಂತಿದೆ.<br>2020-21<br>ಆಹಾರಧಾನ್ಯ: ಪ್ರಮಾಣ (ಮೆ.ಟನ್)<br>ಅಕ್ಕಿ: 4243103.342 |

<table>
<tr><td></td><td></td><td>
<table>
<tr><td>ರಾಗಿ</td><td>193243.068</td></tr>
<tr><td>ಜೋಳ</td><td>9256.348</td></tr>
<tr><td>ಗೋಧಿ</td><td>275061.202</td></tr>
<tr><td>ತೊಗರಿ ಬೇಳೆ</td><td>38168.184</td></tr>
<tr><td>ಕಡಲೆ</td><td>66158.200</td></tr>
<tr><td>ಒಟ್ಟು</td><td>4824990.344</td></tr>
</table>
2021-22
<table>
<tr><th>ಆಹಾರಧಾನ್ಯ</th><th>ಪ್ರಮಾಣ(ಮೆ.ಟನ್)</th></tr>
<tr><td>ಅಕ್ಕಿ</td><td>4422148.996</td></tr>
<tr><td>ರಾಗಿ</td><td>475235.194</td></tr>
<tr><td>ಜೋಳ</td><td>80866.169</td></tr>
<tr><td>ಗೋಧಿ</td><td>248717.340</td></tr>
<tr><td>ಒಟ್ಟು</td><td>4327941.674</td></tr>
</table>
</td></tr>
<tr><td>ಈ</td><td>2020-21, 2021-22ನೇ ಸಾಲುಗಳಲ್ಲಿ ಅನ್ನಭಾಗ್ಯ ಯೋಜನೆಯಡಿ ಖರ್ಚಾದ ಅನುದಾನವೆಷ್ಟು; ನಿಗಧಿಪಡಿಸಿದ್ದ ಅನುದಾನವೆಷ್ಟು ಉಳಿದ ಅನುದಾನವೆಷ್ಟು; (ವಿವರ ನೀಡುವುದು)</td><td>2020-21, 2021-22ನೇ ಸಾಲುಗಳಲ್ಲಿ ಅನ್ನಭಾಗ್ಯ ಯೋಜನೆಯಡಿ ಅಹಾರ ಧಾನ್ಯ ವಿತರಿಸಲು ನಿಗದಿಪಡಿಸಿದ, ಖರ್ಚಾದ ಅನುದಾನದ ವಿವರ:<br>(ರೂ. ಲಕ್ಷಗಳಲ್ಲಿ)
<table>
<tr><th>ವರ್ಷ</th><th>ನಿಗಧಿಪಡಿಸಿದ ಅನುದಾನ</th><th>ಖರ್ಚಾದ ಅನುದಾನ</th></tr>
<tr><td>2020-21</td><td>325762.00</td><td>310365.77</td></tr>
<tr><td>2021-22</td><td>664567.00</td><td>660600.13</td></tr>
</table>
</td></tr>
</table>

| | | |
|---|---|---|
| ಉ | ಪ್ರತಿ ಕೆ.ಜಿ ಆಹಾರಧಾನ್ಯವನ್ನು ಸಂಗ್ರಹಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡುವ ಪಾಲು ಎಷ್ಟು? (ವಿವರ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಕರ್ನಾಟಕ ರಾಜ್ಯಕ್ಕೆ ಪ್ರತಿ ತಿಂಗಳು 2,17,403 ಮೆ.ಟನ್ ಅಕ್ಕಿ ಪೂರೈಕೆಯಾಗುತ್ತದೆ. ಈ ಅಕ್ಕಿಯನ್ನು ಕೇಂದ್ರ ಸರ್ಕಾರದಿಂದ ಪ್ರತಿ ಕೆ.ಜಿ.ಗೆ ರೂ.3 ರಂತೆ ಖರೀದಿಸಲಾಗುತ್ತದೆ.<br>ರಾಜ್ಯದಲ್ಲಿ ಪಡಿತರ ಅಕ್ಕಿಯನ್ನು ಉಚಿತವಾಗಿ ವಿತರಿಸುವುದರಿಂದ ಪ್ರತಿ ಕೆ.ಜಿ.ಗೆ ತಗಲುವ ರೂ. 3/-ರ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ. ರಾಜ್ಯದಲ್ಲಿರುವ ಸುಮಾರು 32 ಲಕ್ಷ ರಾಜ್ಯ ವ್ಯಾಪ್ತಿಯ ಆದ್ಯತ ಪಡಿತರ ಫಲಾನುಭವಿಗಳಿಗೆ ಪ್ರತಿ ಮಾಹೆ ಬೇಕಾಗುವ ಸುಮಾರು 16,000 ಮೆ.ಟನ್ ಅಕ್ಕಿಯನ್ನು ಭಾರತ ಆಹಾರ ನಿಗಮದಿಂದ OMSS ದರ ಪ್ರತಿ ಕೆ.ಜಿ.ಗೆ ರೂ.23 ರಂತೆ ಖರೀದಿಸಿ ವಿತರಿಸಲಾಗುತ್ತಿದ್ದು, ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರದಿಂದಲೇ ಭರಿಸಲಾಗುತ್ತಿದೆ. |

ಆನಾಸ 210 ಡಿಆರ್‌ಎ 2022 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ